# 27-09-2024

Vidyavardhaka Sangha ®

## Vidyavardhaka First Grade College
## Sheshadri Iyer Road, Mysuru

### SHREE SHAKTHI WOMEN EMPOWERMENT CELL

For Girls Students



## Workshop on Self Defense for Women



Chief Guest

Sri.G. Varun Yadav

Engineer and Researcher in Kalaripayattu

Mysuru.






Presided By

Dr.S.MariGowda

Principal, VVFGC,

Mysuru

Prof.Preethi P

Co-ordinator ,Asst Professor

VVFGC, Mysuru

Dr.P.K.Govardhan

Staff Advisor

VVFGC, Mysuru

**Date : 27-09-2024 | Friday |Venue : Sri. P.M.Chikkaboraiah Hall**



"ಶ್ರೀ ಶಕ್ತಿ ಮಹಿಳಾ ಸಬಲೀಕರಣ ಕೋಶ"ದ ಸಹಯೋಗದಲ್ಲಿ ದಿನಾಂಕ:27.09.2024ರ ಶುಕ್ರವಾರ "ಮಹಿಳೆಯರಿಗಾಗಿ ಆತ್ಮರಕ್ಷಣೆ" ಎಂಬ ಕಾರ್ಯಾಗಾರವನ್ನು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿ, ಶ್ರೀ ಜಿ.ವರುಣ್ ಯಾದವ್, ಇಂಜಿನಿಯರಿಂಗ್ ಪದವೀಧರರು ಮತ್ತು "ಕಲರಿಪಯಟ್ಟು"ನ ಸಂಶೋಧಕರು ಹಾಗೂ ಮಹಿಳಾ ಸೈನಿಕರಿಗೆ ಸೈನ್ಯದಲ್ಲಿ ತರಬೇತಿ ನೀಡುತ್ತಿದ್ದಾರೆ. ಕಲರಿಪಯಟ್ಟು ಕೇರಳದಿಂದ ಹುಟ್ಟಿದ ಪ್ರಾಚೀನ ಭಾರತೀಯ ಸಮರ ಕಲೆಯಾಗಿದೆ, ಇದು ದೈಹಿಕ ಶಿಸ್ತು ಮಾತ್ರವಲ್ಲದೆ ಆತ್ಮವಿಶ್ವಾಸ, ಶಕ್ತಿ ಮತ್ತು ಮಾನಸಿಕ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುವ ಪ್ರಬಲ ಸಾಧನವಾಗಿದೆ. ಇಂದಿನ ಜಗತ್ತಿನಲ್ಲಿ ಆತ್ಮರಕ್ಷಣೆಯ ಪ್ರಾಮುಖ್ಯತೆಯನ್ನು ತಿಳಿಸಬೇಕಾಗಿದೆ. ಏಕೆಂದರೆ, ಯಾವುದೇ ಅಪರಿಚಿತರಿಂದ ಹಠಾತ್ ಹಿಂಸಾಚಾರವಾಗಬಹುದು. ಆದರೆ ಅದನ್ನು ಎಂದಿಗೂ ಮೊದಲೇ ಊಹಿಸಲಾಗುವುದಿಲ್ಲ. ನಿರ್ದಿಷ್ಟವಾಗಿ ಮಹಿಳೆಯರು ಇಂತಹ ಸವಾಲುಗಳನ್ನು ಎದುರಿಸುತ್ತಾರೆ ಮತ್ತು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಾಮರ್ಥ್ಯವು ಅಗತ್ಯವಾಗಿರುತ್ತದೆ. ಈ ರೀತಿಯ ಕೌಶಲ್ಯಗಳು ಅಗತ್ಯವಾಗಿರುವ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಮತ್ತು ನಮ್ಮ ಸುರಕ್ಷತೆಯ ಮೇಲೆ ಹಿಡಿತ ಸಾಧಿಸಲು ಇದನ್ನು ಕಲಿಯಬಹುದು. ಕಲರಿಪಯಟ್ಟು ಕೇವಲ ದೈಹಿಕ ಹೋರಾಟವಲ್ಲ, ಇದು ಶಿಸ್ತನ್ನು ಕಲಿಸುತ್ತದೆ, ಮನಸ್ಸನ್ನು ಚುರುಕುಗೊಳಿಸುತ್ತದೆ ತಮ್ಮ ಸುತ್ತಮುತ್ತಲಿನ ಆಳವಾದ ಅರಿವನ್ನು ಮೂಡಿಸುತ್ತದೆ. ಧೈರ್ಯಶಾಲಿ ಮತ್ತು ನೈತಿಕ ಸಮಾಜವನ್ನು ನಿರ್ಮಾಣ ಮಾಡಲು ಶಾಲಾ-ಕಾಲೇಜುಗಳಲ್ಲಿ ಸೈನಿಕ ತರಬೇತಿ ಮತ್ತು ಆತ್ಮರಕ್ಷಣೆ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು ಎಂದು ಅಭಿಪ್ರಾಯಪಟ್ಟರು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಮರಿಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಕೇರಳದಲ್ಲಿ ಕಳರಿಪಯಟ್ಟು ವಿಪುಲವಾಗಿ ಗುರುತಿಸಿಕೊಂಡಿದೆ. ವಿದ್ಯಾರ್ಥಿನಿಯರ ಆತ್ಮರಕ್ಷಣೆಗಾಗಿ ಈ ರೀತಿಯ ಕಾರ್ಯಾಗಾರ ನಮ್ಮ ಕಾಲೇಜಿನಲ್ಲಿ ಇದೇ ಮೊದಲು. ಈ ಕಾರ್ಯಾಗಾರವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ, ಆತ್ಮರಕ್ಷಣೆ, ಸಮಾಜದಲ್ಲಿ ಗೌರವ ಮತ್ತು ಮನ್ನಣೆ ಗಳಿಸಲು ಸಹಾಯ ಮಾಡುತ್ತದೆ ಎಂದು ಅವರು ತಿಳಿಸಿದರು.

ವಿದ್ಯಾರ್ಥಿಗಳಾದ ಕು.ಕಾವ್ಯ ಮತ್ತು ಕು.ಅನು ಅವರುಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ಪ್ರೊ. ಪ್ರೀತಿ ಸ್ವಾಗತಿಸಿದರು. ಪ್ರೊ. ಪಲ್ಲವಿ ಡಿ ಕಾರ್ಯಕ್ರಮ ನಿರೂಪಿಸಿದರೇ ಪ್ರೊ. ಯಮುನಾ ಎಂ. ಜೆ ವಂದಿಸಿದರು. ಡಾ. ಪಿ. ಕೆ. ಗೋವರ್ಧನ್, ಸಿಬ್ಬಂದಿ ಸಲಹೆಗಾರ ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ ಬೋಧಕ ಮತ್ತು ಬೋಧಕೇತರ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.








Sheshadri Iyer Road, Mysuru
SHREE SHAKTHI WOMEN EMPOWERMENT CELL
For Girls Student
Workshop on Self Defense for Women
Chief Guest
Sri.G. Varun Yadav
Engineer and Researcher in Kalaripayattu
Mysuru


Sri.G.VARUN YADAV








Vidyavardhaka First Grade College
Sheshadri Iyer Road, Mysuru
SHREE SHAKTHI WOMEN EMPOWERMENT CELL
For Girls Student
Workshop on Self Defense for Women

















